# ಜ್ಯೋತಿಷ ಮಿತ್ರ

ಡಿಜಿಟಲ್ ದಿನಪತ್ರಿಕೆ

www.jyothishamithra.com

ಸಂಚಿಕೆ : 181    22-12-2025    ಸೋಮವಾರ

## ನಿತ್ಯ ಪಂಚಾಂಗ

ವಿಶ್ವಾವಸು ಸಂವತ್ಸರ ದಕ್ಷಿಣಾಯನ ಹೇಮಂತಋತು

ಪೌಷ ಶುಕ್ಲಪಕ್ಷ

ತಿಥಿ : ಬಿದಿಗೆ(10:51) ನಕ್ಷತ್ರ : ಉತ್ತರಾಷಾಢಾ(29:31)

ರಾಹುಕಾಲ : 08:12 AM - 09:38 AM

ಗುಳಿಕಕಾಲ : 01:54 PM - 03:19 PM

## ಸುಜ್ಞಾನ

ಮನುಷ್ಯನಿಗೆ ಬೆಲೆ ಬರುವುದು ರೂಪದಿಂದಲ್ಲ ಕಾರ್ಯದಿಂದ. ನಮ್ಮ ಕಾರ್ಯ ಇತರರನ್ನು ನಮ್ಮತ್ತ ಆಕರ್ಷಿಸುವಂತೆ ಇರಬೇಕು.



# ಚಂದ್ರನಿಗೆ ಇಪ್ಪತ್ತೇಳು ಪತ್ನಿಯರು...!
# ಶಿವ ಚಂದ್ರಶೇಖರನಾದ... !

ದಕ್ಷಪ್ರಜಾಪತಿಯು ತನ್ನ ಅರವತ್ತು ಹೆಣ್ಣುಮಕ್ಕಳಲ್ಲಿ ಇಪ್ಪತ್ತೇಳು ಮಕ್ಕಳನ್ನು ಚಂದ್ರನಿಗೆ ಕೊಟ್ಟನು. ಈ ಚಂದ್ರನ ಪತ್ನಿಯರೇ ಇಪ್ಪತ್ತೇಳು ನಕ್ಷತ್ರಗಳು. ಚಂದ್ರನು ರೋಹಿಣೀ ಎಂಬವಳಲ್ಲಿ ಮಾತ್ರ ಅತಿಶಯವಾಗಿ ಅನುರಕ್ತನಾದಾಗ ಉಳಿದವರು ಅಪ್ಪನಲ್ಲಿ ದೂರಿದರು. ಅಪ್ಪ ಅಳಿಯನಿಗೆ ಕ್ಷಯರೋಗ ಬರುವಂತೆ ಶಪಿಸಿದ.


## ಚಂದ್ರನ ಗುಣ-ಲಕ್ಷಣಗಳು

ಚಂದ್ರ, ಶಶಿ, ಇಂದು, ಸೋಮ, ಶೀತಗು, ವಿಧು, ಇವು ಚಂದ್ರನ ಪ್ರಸಿದ್ಧ ಹೆಸರುಗಳು. ಸೂರ್ಯ ಬೆಳಕು ಕೊಡುವ ದೇವನಾದರೆ, ತಾಪದಿಂದ ಬೆಂದವನಿಗೆ ತಂಪು ಕೊಡುವ ದೇವತೆ ಚಂದ್ರ. ಸೌಮ್ಯ ಸ್ವಭಾವ, ಸುಂದರವಾದ ಕಣ್ಣುಗಳು, ಮಧುರ ಮಾತು, ಬಿಳಿಬಣ್ಣ, ಬೊಜ್ಜು ಇಲ್ಲದ ಶರೀರ, ಮಧ್ಯವಯಸ್ಕ, ಎತ್ತರದ ನಿಲುವು. ಕಪ್ಪು ಗುಂಗುರು ಕೂದಲು, ಬುದ್ಧಿವಂತಿಕೆ, ಸಾತ್ವಿಕತೆ, ಬಹುಜನ ಮೈತ್ರಿ, ದಯಾಳತ್ವ, ಚಾಂಚಲ್ಯ, ಮಾತೃ ಸ್ವಭಾವ, ಸೌಭಾಗ್ಯ, ಬಿಳಿಯ ಉಡುಗೆ ಇವು ಚಂದ್ರನ ಗುಣಲಕ್ಷಣಗಳು.

## ಗುರುವಿನ ಹೆಂಡತಿಯೊಂದಿಗೆ ಪ್ರೇಮ...!

ಚಂದ್ರ ವಿದ್ಯಾಭ್ಯಾಸಕ್ಕಾಗಿ ದೇವಗುರುವಾದ ಬೃಹಸ್ಪತಿಯಲ್ಲಿ ಹೋಗಿದ್ದ. ಸುಂದರಾಂಗನಾದ ಇವನನ್ನು ಗುರುಪತ್ನಿ ತಾರೆ ಮೋಹಿಸಿದಳು. ಆಕೆಯನ್ನು ಚಂದ್ರ

ಬಲಾತ್ಕಾರದಿಂದ ಅಪಹರಿಸಿ ಬುಧನನ್ನು ಪಡೆದ.




## ಶಿವ ಚಂದ್ರಶೇಖರನಾದ... !

ಸಮುದ್ರಮಥನ ಕಾಲದಲ್ಲಿ ಸಾಗರದಿಂದ ಆವಿರ್ಭವಿಸಿದ ಚಂದ್ರನನ್ನು ಶಿವ ತಲೆಯಲ್ಲಿ ಧರಿಸಿ ಚಂದ್ರಶೇಖರನೆನಿಸಿದ.

ಅಮೃತಪಾನದ ಸಂದರ್ಭದಲ್ಲಿ ಈತ ಸೂರ್ಯನೊಂದಿಗೆ ಸೇರಿಕೊಂಡು ಮಾಯಾವಿಯಾದ ರಾಹುವನ್ನು ವಿಷ್ಣುವಿಗೆ ಸೂಚಿಸಿದ. ವಿಷ್ಣು ಚಕ್ರಾಯುಧದಿಂದ ರಾಹುವಿನ ಶಿರವನ್ನು ಭೇದಿಸಿದರೂ ಅಮೃತದ ಪ್ರಭಾವದಿಂದ ರುಂಡವು ರಾಹುಗ್ರಹವೆನಿಸಿ ಚಂದ್ರಸೂರ್ಯರನ್ನು ದ್ವೇಶಿಸ ತೊಡಗಿತು.






# ಆಯುಷ್ಯ ಕಾರಕನಾದ

# ಶನಿಯ ವಿಚಾರ

ಜ್ಯೋತಿಷ ಶಾಸ್ತ್ರದಲ್ಲಿ ಶನಿಗೆ ಮಹತ್ತರ ಪಾತ್ರವನ್ನು ನೀಡಲಾಗಿದೆ. ಶನಿಯ ಒಂದುಕಾಲು ಚಿಕ್ಕದು ಆದ್ದರಿಂದ ನಿಧಾನವಾಗಿ ಚಲಿಸುತ್ತಾನೆ. ಆದಕ್ಕಾಗಿ ಆವನನ್ನು ಶನೈಶ್ಚರ (ಶನೈಃ - ನಿಧಾನವಾಗಿ, ಚರ - ಚಲಿಸುವ) ಎಂದು ಕರೆಯುತ್ತಾರೆ. ಶನಿಯು ಕಪ್ಪು ಮತ್ತು ನೀಲಿ ಬಟ್ಟೆಯನ್ನು ಧರಿಸುತ್ತಾನೆ.

ಜ್ಯೋತಿಷ್ಯ ಶಾಸ್ತ್ರದದಲ್ಲಿ ಶನಿಯು ಆಯುಷ್ಯ - ಕರ್ಮ ಕಾರಕನಾಗಿದ್ದಾನೆ. ಜಾತಕನಿಗೆ ಶನಿಯ ಕೃಪೆಯಿದ್ದಲ್ಲಿ ಮಾತ್ರ ಪೂರ್ಣಾಯುಷ್ಯದೊಂದಿಗೆ ಉತ್ತಮ ಜೀವನ ನಡೆಸಲು ಸಾಧ್ಯ.

## ಆರೋಗ್ಯವೇ ಭಾಗ್ಯ

ದೀರ್ಘಾಯುಷ್ಯದೊಂದಿಗೆ ಉತ್ತಮ ಆರೋಗ್ಯವಿದ್ದರೆ ಮಾತ್ರ ನೆಮ್ಮದಿಯ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ. ಕೆಲವರಲ್ಲಿ ವಿಪರೀತವೆನಿಸುವಷ್ಟು ಹಣ-ಸಂಪತ್ತಿದ್ದರೂ ಅನಾರೋಗ್ಯ ಸಮಸ್ಯೆಯಿಂದಾಗಿ ನರಕಯಾತನೆಯನ್ನು ಅನುಭವಿಸುತ್ತಿರುತ್ತಾರೆ. ಇನ್ನು ಕೆಲವರಿಗೆ ಒಂದೊತ್ತಿನ ಊಟಕ್ಕೂ ಗತಿಯಿರುವುದಿಲ್ಲ, ಆದರೂ ಆರೋಗ್ಯ ಉತ್ತಮವಾಗಿರುತ್ತದೆ. ಅನಾರೋಗ್ಯ ಸಮಸ್ಯೆಯು ನಾವು ಜೀವನದಲ್ಲಿ ಮಾಡಬೇಕಾದ ಕಾರ್ಯಗಳಿಗೆ ತಡೆಯನ್ನು ಉಂಟು ಮಾಡುತ್ತದೆ.

ಉದಾಹರಣೆಗೆ ವಿದ್ಯಾಭ್ಯಾಸದ ಸಮಯದಲ್ಲಿ ಅನಾರೋಗ್ಯ ಸಮಸ್ಯೆ ಉಂಟಾದರೆ ಸರಿಯಾಗಿ ಕಲಿಯಲು ಆಗದೆ ಅನುತ್ತೀರ್ಣ ಅಥವಾ ಕಡಿಮೆ ಅಂಕವನ್ನು ಪಡೆಯಬೇಕಾಗುತ್ತದೆ. ಇದರ ಪರಿಣಾಮದಿಂದ



ಮುಂದೆ ಸರಿಯಾದ ಉದ್ಯೋಗ ಲಭಿಸದೆ, ಹಣಕಾಸು ಸಮಸ್ಯೆ ಯಿಂದ ಕಷ್ಟನಷ್ಟಗಳನ್ನು ಅನುಭವಿಸ ಬೇಕಾಗುತ್ತದೆ. ಇದೇ ಕಾರಣಕ್ಕೆ ನಮ್ಮ ಹಿರಿಯರು “ಆರೋಗ್ಯವೇ ಭಾಗ್ಯ” ಎಂದು ನುಡಿದಿದ್ದಾರೆ.

## ಆಯುಷ್ಯವನ್ನು ನಿರ್ಧರಿಸಲು ಚತುರ್ಮುಖನಾದ ಬ್ರಹ್ಮನಿಂದಲೂ ಸಾಧ್ಯವಿಲ್ಲ...!

ಅಲ್ಪಾಯುಷ್ಯ, ಮಧ್ಯಾಯುಷ್ಯ, ದೀರ್ಘಾಯುಷ್ಯ, ಇವು

ಆಯುಷ್ಯದ ಮೂರು ವಿಧಗಳು. ಇತ್ತೀಚಿನ ದಿನಗಳಲ್ಲಿ ಹೆಚ್ಚಿನವರು ಮಧ್ಯಾಯುಷ್ಯ ದಲ್ಲೇ ನಿಧನರಾಗುವುದನ್ನು ನಾವು ಕಾಣಬಹುದಾಗಿದೆ. ಆಯುಷ್ಯವನ್ನು ನಿರ್ಧರಿಸಲು ಚತುರ್ಮುಖನಾದ ಬ್ರಹ್ಮ



ನಿಂದಲೂ ಸಾಧ್ಯವಿಲ್ಲ ಎಂದು ಶಾಸ್ತ್ರದಲ್ಲಿದೆ.

## ಜಾತಕದಲ್ಲಿ ಶನಿಯು ಬಲಿಷ್ಠನಾಗಿದ್ದರೆ ಮಾತ್ರ ದೀರ್ಘಾಯುಷ್ಯದೊಂದಿಗೆ ಉತ್ತಮ ಆರೋಗ್ಯವನ್ನು ಪಡೆಯಬಹುದು

ಜಾತಕದಲ್ಲಿ ಆಯುಷ್ಯ ಹಾಗೂ ಅನಾರೋಗ್ಯ ಕಾರಕನಾದ ಶನಿಯು ಬಲಿಷ್ಠನಾಗಿದ್ದರೆ ಮಾತ್ರ ದೀರ್ಘಾಯುಷ್ಯದೊಂದಿಗೆ ಉತ್ತಮ ಆರೋಗ್ಯವನ್ನು ಪಡೆಯಬಹುದು. ಶನಿಯು ರೋಗಭಾವವಾದ ಆರಕ್ಕೂ,

ಮೃತ್ಯುಭಾವವಾದ ಎಂಟಕ್ಕೂ, ಕರ್ಮಭಾವವಾದ ಹತ್ತಕ್ಕೂ, ವ್ಯಯಭಾವವಾದ ಹನ್ನೆರಡಕ್ಕೂ ಕಾರಕನು.






## ಶನಿ-ಮಾಂದಿ ಯೋಗವು ಅತ್ಯಂತ ದೋಷಪ್ರದ...!


ಶನಿಯು ಕುಜ, ರಾಹು, ಮಾಂದಿಯಿಂದ ಯುತನಾದರೆ ದೋಷವನ್ನು ಉಂಟು ಮಾಡುವನು. ಶನಿ-ಮಾಂದಿ ಯೋಗವು ಅತ್ಯಂತ ದೋಷಪ್ರದ. ಅಶುಚಿಯ, ಪಾಪದ ಸಂಕೇತ. ಗೋಚಾರದಲ್ಲಿ 1, 12, 2, 4, 5, 7, 8, 9, 10ರಲ್ಲಿದ್ದಾಗ ದೋಷಪ್ರದನು. ತತ್ರಾಪಿ ಸಾಡೇಸಾತ್, ಪಂಚಮ, ಅಷ್ಟಮ, ಅರ್ಧಾಷ್ಟಮದ ಶನಿಯು ಅತಿ ದೋಷಪ್ರದನು.




## ಶನಿ ದೋಷಕ್ಕೆ ಪರಿಹಾರ

ಶನಿಯನ್ನು ಸಂತೃಪ್ತಿಗೊಳಿಸುವ ಉಪಾಯವೆಂದರೆ, ತಾನು ಮಾಡಿದ ತಪ್ಪುಗಳ ಜವಾಬ್ದಾರಿಯನ್ನು ಹೊರಲು ಸಿದ್ಧನಿರಬೇಕು, ಆತ್ಮ ವಿಮರ್ಶೆಯನ್ನು ಮಾಡಿಕೊಳ್ಳ

ಬೇಕು, ಕಷ್ಟ ಪಡಬೇಕು. ಶನಿವಾರದಂದು ನೀಲಿ ಬಣ್ಣದ ಬಟ್ಟೆಯನ್ನು ದಾನ ಮಾಡಬೇಕು ಹಾಗು ಬಡವರಿಗೆ ಸಹಾಯ ಮಾಡಬೇಕು. ಪ್ರತಿದಿನ ' ರಾಮ - ನಾಮ ', ಹನುಮಾನ್ ಚಾಲೀಸನ್ನು ಪಠಿಸಬೇಕು.


ಜ್ಯೋತಿಷ ಮಿತ್ರ ಆನ್ಲೈನ್ ದಿನಪತ್ರಿಕೆ

ಗೌರವ ಸಂಪಾದಕರು : ಜೀವನ್ ಉಳ್ಳಾಲ್ | ಸಂಪಾದಕರು : ಶ್ರೇಷ ಎಸ್. | ಸಂಪರ್ಕಿಸಿ 9986671473 / 9535283535

www.jyothishamithra.com